ಹೆಸರುಘಟ್ಟ ಕೋಳಿ ಫಾರಂ ಹೀನಸ್ಥಿತಿ

280 (925) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಸರಘಟ್ಟ ಪಶುಸಂಗೋಪನಾ ಇಲಾಖೆಯ ಕೋಳಿ ಫಾರಂಗಳಲ್ಲಿ 10 ವರ್ಷಗಳ ಹಿಂದೆ ಸುಮಾರು 30,000 ಕೋಳಿಗಳಿದ್ದು ಪ್ರತಿ ವಾರವು 1.00 ಲಕ್ಷ ಮೊಟ್ಟೆಗಳು ಮಾರಾಟವಾಗುತ್ತಿದ್ದುದು ಸರ್ಕಾರದ ಗಮನದಲ್ಲಿದೆಯೆ;

ಆ) ಈಗ ಮೇಲ್ಕಂಡ ಫಾರಂನಲ್ಲಿ ಕೇವಲ 1500 ಕೋಳಿಗಳಿದ್ದು, ಫಾರಂ ಸಂಪೂರ್ಣ ನಾಶದ ಹಂತದಲ್ಲಿರುವುದು ನಿಜವೆ, ಹಾಗಿದ್ದಲ್ಲಿ ಕಾರಣಗಳೇನು;

ಇ) ಶೇಕಡ 70ಕ್ಕೂ ಹೆಚ್ಚುಕೋಳಿ ಕೇಂದ್ರಗಳು ಖಾಲಿಯಿರುವುದು ನಿಜವೆ; ಹಾಗಿದ್ದಲ್ಲಿ ಸರ್ಕಾರದ ಹಣವು ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಈ) ಸಂಬಂಧಪಟ್ಟ ಡಾಕ್ಟರ್ ಮತ್ತು ಸಿಬ್ಬಂದಿಗಳ ಮೇಲೆ ಸರ್ಕಾರವು ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):-

ಅ) ಇಲ್ಲಾ.

ಆ) ನಿಜವಲ್ಲ.

ಇ) ಇಲ್ಲಾ.

ಈ) ಉದ್ಭವಿಸುವುದಿಲ್ಲ.

ಅರಣ್ಯ ಭೂಮಿಯ ಅತಿಕ್ರಮಣವನ್ನು ಸಕ್ರಮಗೊಳಿಸುವುದು.

282 (1019) ಶ್ರೀ ಜಿ.ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):-

ಅರಣ್ಯ ರಾಜ್ಯ ಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಅರಣ್ಯ ಭೂಮಿಯಲ್ಲಿನ ಅತಿಕ್ರಮಣವನ್ನು ಅರ್ಹರಾದವರಿಗೆ ಸಕ್ರಮಗೊಳಿಸಲು ಸರ್ಕಾರವು ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸಿದೆಯೆ ?

ಬಿ) ಅರಣ್ಯ ಪ್ರದೇಶದ ಎಷ್ಟು ಪ್ರದೇಶದಲ್ಲಿ ಅತಿಕ್ರಮಣಾಗಿದೆ ಎಂಬುದನ್ನು ಅಂದಾಜು ಮಾಡಿದೆಯೇ;

ಸಿ) ಎಷ್ಟು ವರ್ಷಗಳ ಅವಧಿಯಲ್ಲಿ ಆದ ಅತಿಕ್ರಮಣಗಳನ್ನು ಸಕ್ರಮಗೊಳಿಸಲಾಗುವುದು;

ಡಿ) ಅತಿಕ್ರಮಣವನ್ನು ಸಕ್ರಮಗೊಳಿಸುವ ಮಾರ್ಗ ಸೂಚಿಯನ್ನು ತಾಲ್ಲೂಕು ಮಟ್ಟದ ಸಮಿತಿಗೆ ತಿಳಿಸಿದೆಯೆ;

ಇ) ಸಮಿತಿಯು ವರದಿ ಸಲ್ಲಿಸಲು ಕಾಲಮಿತಿಯನ್ನು ಹಾಕಲಾಗಿದೆಯೇ ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಮಂತ್ರಿಗಳು):-

ಎ) ಹೌದು.

ಬಿ) ಒಟ್ಟು 43,305.58 ಹೆಕ್ಟೇರ್ ಅರಣ್ಯ ಭೂಮಿ ಅತಿಕ್ರಮಣವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಸಿ) ದಿನಾಂಕ 27–4–1978ರ ಹಿಂದೆ ಅತಿಕ್ರಮಣ ಮಾಡಿದ್ದಲ್ಲಿ ಅಂತಹ ಅತಿಕ್ರಮಣದ ಅರಣ್ಯ ಭೂಮಿಯನ್ನು ಅರಣ್ಯ ಸಂರಕ್ಷಣೆ ಕಾಯಿದೆ 1980ರ ಅನ್ವಯ ಭಾರತ ಸರ್ಕಾರದ ಅನುಮತಿಯನ್ನು ಪಡೆದು ಸಕ್ರಮಗೊಳಿಸಲು ಉದ್ದೇಶಿಸಲಾಗಿದೆ.

ಡಿ) ಹೌದು.

ಇ) ಇಲ್ಲಾ.

ಏಡ್ಸ್ ರೋಗದ ಸೋಂಕು ತಡೆಗಟ್ಟಲು ರಕ್ತ ಪರೀಕ್ಷೆ

283 (1017) ಜಿ.ಪುಟ್ಟಸ್ವಾಮಿ ಗೌಡ (ಹೊಳೇ ನರಸಿಪುರ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಏಡ್ಸ್ ರೋಗದ ಸೋಂಕು ಹರಡುವುದನ್ನು ತಡೆಗಟ್ಟಲು ರಕ್ತಪರೀಕ್ಷೆ ಮಾಡುವ ವ್ಯವಸ್ಥೆಯನ್ನು ಪರಿಶೋಧಿಸುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಸಿಕೊಂಡಿದೆಯೇ ?

ಬಿ) ಇಲ್ಲದಿದ್ದರೆ ಈ ತರಹದ ಕಾರ್ಯಕ್ರಮವನ್ನು ಹಾಕಿಕೊಳ್ಳಲು ಸರ್ಕಾರಿ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಎ) ರಕ್ತ ಪರೀಕ್ಷೆಯ ವ್ಯವಸ್ಥೆಯನ್ನು ಪರಿಶೋಧಿಸುವ ವಿಷಯವು ಒಂದು ಹೊಸ ಸಂಗತಿಯಾಗಿದ್ದು ಇದನ್ನು ಸರ್ಕಾರ ಪರಿಶೀಲಿಸುತ್ತಿದೆ. ಪ್ರಸ್ತುತ ಆ ರೀತಿಯ ಪರಿಶೋಧನೆ ಪ್ರಾರಂಭಿಸಿಲ್ಲ.

ಬಿ) ಹೌದು. ಸರ್ಕಾರ ಈ ತರಹದ ಕಾರ್ಯಕ್ರಮ ಹಾಕಿಕೊಳ್ಳಲು ಬಯಸುತ್ತದೆ.

ಭದ್ರಾವತಿ ತಾಲ್ಲೂಕಿನಲ್ಲಿ ಬಿದ್ದ ಬಾರಿ ಮಳೆಯಿಂದಾಗಿ ಮೀನುಗಾರರ ಬಲೆಗಳು ಕೊಚ್ಚಿ ಹೋಗಿ ಪರಿಹಾರಕ್ಕೆ ಒತ್ತಾಯ

285 (1026) ಶ್ರೀ ಕರಿಯಣ್ಣ (ಹೊಳೇಹೊನ್ನೂರು):-

ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ದಿನಾಂಕ 16,17ರ ನವೆಂಬರ್, 1992ರಂದು ಬಿದ್ದ ಬಾರಿ ಮಳೆಯಿಂದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ 15 ಪ್ರಮುಖವಾದ ಕೆರೆಗಳು ಒಡೆದು ಮೀನು ಸಾಕಾಣಿದಾರರ ಮೀನುಗಳು ಹಾಗೂ ನದಿಯ ಬುಡದಲ್ಲಿದ್ದ ಮೀನುಗಾರರ ಬಲೆಗಳು ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಿ) ಹಾಗಿದ್ದಲ್ಲಿ, ಈ ಬಡ ಮೀನುಗಾರರಿಗೆ ಸರ್ಕಾರವು ಪರಿಹಾರವನ್ನು ನೀಡಿದೆಯೇ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳು ರಾಜ್ಯ ಸಚಿವರು):–